ಸಿ.ಸಿ. ನಂ.557/2023

ಪಿ.ಡಬ್ಲ್ಯು 1

(ಇಂದು ದಿನಾಂಕಃ 07-11-2023 ರಂದು ಸತ್ಯಪ್ರತಿಜ್ಞೆಯ ಮೇರೆಗೆ ಪ್ರಮಾಣವಚನ ಬೋಧಿಸಲಾಯಿತು.)

**ಪಾಟೀ ಸವಾಲು –ಆರೋಪಿ ಪರ ಶ್ರೀ ವಿ.ಎಸ್.ಪಿ. ವಕೀಲರಿಂದ**

ನನ್ನ ಖಾಯಂ ವಾಸ್ತವ್ಯ ಕುಮಟಾ ತಾಲೂಕು ವನ್ನಳ್ಳಿ ಗ್ರಾಮವಾಗಿರುತ್ತದೆ. ನಾನು ಫಾರೆಸ್ಟ ಕಾಂಟ್ರೆಕ್ಟರ್, ಖಾಸಗಿ ಗ್ಯಾಸ್ ಎಜೆನ್ಸಿಯಲ್ಲಿ ಕೆಲಸ ಹಾಗೂ ರಿಯಲ್ ಎಸ್ಟೆಟ್ ವ್ಯವಹಾರವನ್ನು ಮಾಡುತ್ತೇನೆ. ಫಾರೆಸ್ಟ ಕಾಂಟ್ರೆಕ್ಟರ್ ಹಾಗೂ ಖಾಸಗಿ ಗ್ಯಾಸ್ ಎಜೆನ್ಸಿ ಕೆಲಸಕ್ಕೆ ಸಂಬಂಧಪಟ್ಟಂತೆ ನನ್ನ ಬಳಿ ಪರವಾನಿಗೆ ಇರುತ್ತದೆ. ಸುಮಾರು 5 ವರ್ಷಗಳಿಂದ ನಾನು ಮೇಲೆ ತಿಳಿಸಿದ ವ್ಯವಹಾರಗಳನ್ನು ಮಾಡುತ್ತೇನೆ. ನನ್ನ ಮೂರು ವ್ಯವಹಾರಕ್ಕೆ ಸಂಬಂಧಿಸಿದಂತೆ ಮಾಸಿಕ ಆದಾಯ ಸುಮಾರು 1 ಲಕ್ಷ ಇರಬಹುದು. ನನ್ನ ಆದಾಯಕ್ಕೆ ಸಂಬಂಧಿಸಿದಂತೆ ದಾಖಲೆಗಳನ್ನು ಹಾಜರುಪಡಿಸಸಲು ತೊಂದರೆ ಇಲ್ಲ. ನಾನು ಸರಕಾರಕ್ಕೆ ಆದಾಯ ತೆರಿಗೆಯನ್ನು ಕಟ್ಟುತ್ತೇನೆ. ಶಾಂತಿಕಾ ವೆಂಚರ್ಸ ಎಂಬುದು Electric Bike Distributors ಫರ್ಮ ಆಗಿರುತ್ತದೆ ಎಂದು ಆರೋಪಿಯು ಹೇಳಿರುತ್ತಾನೆ. ಆರೋಪಿಯು ಸುಮಾರು 10 ವರ್ಷಗಳಿಂದ ಪರಿಚಯ ಇರುತ್ತಾನೆ. ಆರೋಪಿಯು ನನ್ನೊಟ್ಟಿಗೆ ಕ್ರಿಕೆಟನ್ನು ಆಡಲು ಬರುತ್ತಿದ್ದನು. ನಾನು ಶಾಂತಿಕಾ ವೆಂಚರ್ಸ ಫಾರ್ಮನ್ನು ನಾನು ಖುದ್ದಾಗಿ ನೋಡಿರುವುದಿಲ್ಲ. ಸದರಿ ಫಾರ್ಮ ಅಂಕೋಲಾದಲ್ಲಿ ಇದೆ ಎಂದು ಆರೋಪಿಯು ತಿಳಿಸಿರುತ್ತಾನೆ. ಫಿರ್ಯಾದಿನಲ್ಲಿ ಬರೆದ ವಿಚಾರ ನನಗೆ ಗೊತ್ತಿದೆ. ಆರೋಪಿಗೆ ಸೇರಿದ ಪೆಟ್ರೋಲ್ ಬಂಕ್ ಮತ್ತು ಪೆಟ್ರೋಲ್ ಟ್ಯಾಂಕರ್ ಇದೆ ಎಂದು ಆರೋಪಿ ನನಗೆ ತಿಳಿಸಿರುತ್ತಾನೆ. ಆರೋಪಿಯು ಅಂಕೋಲಾ ತಾಲೂಕಿನವರು. ಆರೋಪಿಯು ಪ್ರಥಮ ಬಾರಿಗೆ ಕ್ರಿಕೆಟ್ ಆಟ ಆಡಲು ವನ್ನಳ್ಳಿಗೆ ಬಂದಾಗ ನನಗೆ ಆತನ ಪರಿಚಯ ಆಗಿರುತ್ತದೆ. ಶಾಂತಿಕಾ ವೆಂಚರ್ಸನ ಅಭಿವೃದ್ದಿಗೆ ಆರೋಪಿಯು ಹಣ ಕೇಳಿದಾಗ ನಾನು ಸದರಿ ಶಾಂತಿಕಾ ವೆಂಚರ್ಸ ಪಾರ್ಮಗೆ ಹೋಗಿ ಪರಿಶೀಲನೆ ಮಾಡಿರುವುದಿಲ್ಲ.

**(ಈ ಹಂತದಲ್ಲಿ ಆರೋಪಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ನೀಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

ಪ್ರ.ದ.ನ್ಯಾ.ದಂ. ಕುಮಟಾ